ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

# ಬಾಳೆ ಬೆಳೆಯಲ್ಲಿ ಕ್ಷೇತ್ರೋತ್ಸವ

ನಂಜನಗೂಡು ತಾಲ್ಲೂಕಿನ ಹುಳಿಮಾವು ಗ್ರಾಮದಲ್ಲಿ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು ಶ್ರೀ ವಿಶ್ವನಾಥ್ ಶಿವಕುಮಾರ್ ರವರ ತಾಕಿನಲ್ಲಿ "ಹೆಚ್ಚಿನ ಸಾಂದ್ರತೆಯ ಬಾಳೆ ಬೆಳೆಯ ಕ್ಷೇತ್ರೋತ್ಸವ" ಕಾರ್ಯಕ್ರಮವನ್ನು ದಿನಾಂಕ 12-12-2013 ರಂದು ಹಮ್ಮಿಕೊಂಡಿತ್ತು. ಸಾಮನ್ಯ ಪದ್ಧತಿಯಲ್ಲಿ ಪ್ರತಿ ಎಕರೆಗೆ 1234 ಸಸಿಗಳನ್ನು ನಾಟಿ ಮಾಡಲಾಗುತ್ತಿದ್ದು, ಸುಧಾರಿತ ಪದ್ದತಿಯಲ್ಲಿ ಪ್ರತಿ ಎಕರೆಗೆ 2086 ಸಸಿಗಳನ್ನು ನಾಟಿ ಮಾಡಲು ಶಿಫಾರಸ್ಸು ಮಾಡಲಾಗಿದೆ. ಈ ಸುಧಾರಿತ ಪದ್ದತಿಯಲ್ಲಿ ಮಧ್ಯಮ ಗಾತ್ರ ಹಾಗೂ ಮಾರುಕಟ್ಟೆಗೆ ಸೂಕ್ತವಾದ ಹಣ್ಣುಗಳನ್ನು ಕಟಾವು ಮಾಡಬಹುದಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಅರುಣ್ ಬಳಮಟ್ಟಿಯವರು ವಹಿಸಿ, ಹೆಚ್ಚಿನ ರೈತರು ಈ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸಂಪನ್ಮೂಲಗಳ ಸದ್ಬಳಕೆ ಮಾಡಿ ಉತ್ಪಾದಕತೆ ಹಾಗೂ ಆರ್ಥಿಕತೆ ಹೆಚ್ಚಿಸಿಕೊಳ್ಳಬಹುದಾಗಿದೆ ಎಂದರು. ಅಲ್ಲದೇ, ಕೆವಿಕೆಯ ತೋಟಗಾರಿಕಾ ವಿಷಯ ತಜ್ಞರಾದ ಶ್ರೀನಿವಾಸ್ ಮಂಕಣಿಯವರು ನಾಟಿ ಮಾಡುವ ಪದ್ಧತಿ, ನೀರು, ಗೊಬ್ಬರ ಮತ್ತು ಕಳೆಗಳ ನಿರ್ವಹಣೆ ಹಾಗೂ ಬಾಳೆ ಬೆಳೆಯ ಇತರ ನಿರ್ವಹಣೆ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಿದರು.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಶ್ರೀನಿವಾಸ್ ಮಂಕಣಿಯವರು ಸ್ವಾಗತಿಸಿ ಶ್ರೀ ಜೆ ಜಿ ರಾಜಣ್ಣ ವಂದಿಸಿದರು. ಇಫ್ಕೋ ಸಂಸ್ಥೆಯ ಕ್ಷೇತ್ರ ವ್ಯವಸ್ಥಾಪಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ತಂತ್ರಜ್ಞಾನ ಅಳವಡಿಸಿದ ರೈತ ಶ್ರೀ ವಿಶ್ವನಾಥ್ ಶಿವಕುಮಾರ್‌ರವರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಹುಳಿಮಾವು, ಮೇಗಲಾಪುರ, ಪಿ. ಜಿ. ಹುಂಡಿ, ಕಲ್ಮಹಳ್ಳಿ, ಹಾಗೂ ಸುತ್ತಮುತ್ತಲಿನ ರೈತರು ಭಾಗವಹಿಸಿದ್ದರು.



